**ಸಾಕ್ಷಿಯನ್ನು ದಿನಾಂಕಃ 06-11-2025 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ- ವಾದಿ ಪರ ಶ್ರೀ ಎ.ಎಸ್.ವಾಯ್ ವಕೀಲರಿಂದ.**

ದಾವಾ ಆಸ್ತಿಗಳ ನಂಬರಗಳನ್ನು ನನಗೆ ಹೇಳಲು ಬರುವುದಿಲ್ಲ, ಏಕೆಂದರೆ ನಾನು ಶಾಲೆ ಕಲಿತಿರುವುದಿಲ್ಲ. ದಾವಾ ಆಸ್ತಿಗಳು ಮೊದಲು ನನ್ನ ಗಂಡನಾದ ಅಂಬಾದಾಸ ಇವರ ಹೆಸರಿನಲ್ಲಿ ಇದ್ದವು. ನನ್ನ ಗಂಡನಾದ ಅಂಬಾದಾಸ ಇವನಿಗೆ ಹಣದ ಅಡಚಣೆ ಇದ್ದುದ್ದರಿಂದ ದಿನಾಂಕ 29-09-2010 ರಂದು ದಾವಾ ಆಸ್ತಿಗಳನ್ನು ರೂ.6,20,000/- ಗಳಿಗೆ ವಾದಿಗೆ ನೊಂದಾಯಿತ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ಅಂಬಾದಾಸ ಇವರು ದಾವಾ ಆಸ್ತಿಯಲ್ಲಿರುವ ಮನೆಯ ಸ್ವಾಧೀನತೆಯನ್ನು ಸಹ ವಾದಿಗೆ ನೀಡಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾವು ವಾದಿಗೆ ನಮಗೆ ಇರಲು ಬೇರೆ ಮನೆ ಇರುವುದಿಲ್ಲ, ಆದ್ದರಿಂದ ಮೂರು ತಿಂಗಳುಗಳವರೆಗೆ ದಾವಾ ಆಸ್ತಿಗಳಲ್ಲಿಯ ಮನೆಯಲ್ಲಿ ಇರುತ್ತೇವೆ ಎಂದು ಹೇಳಿದ ಮೇರೆಗೆ ವಾದಿಯು ನಮಗೆ ದಾವಾ ಆಸ್ತಿಯಲ್ಲಿರುವ ಮನೆಯಲ್ಲಿ ಮೂರು ತಿಂಗಳು ಇರಲು ಅನುಮತಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಮೂರು ತಿಂಗಳು ಅವಧಿ ಆದ ನಂತರವು ಸಹ ನಾವು ದಾವಾ ಆಸ್ತಿಯನ್ನು ಖಾಲಿ ಮಾಡಿ ವಾದಿಗೆ ಸ್ವಾಧೀನತೆಯನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನಾವು ಮಾತು ಕೊಟ್ಟಂತೆ ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಗೆ ಕೊಡದೆ ಇದ್ದುದ್ದರಿಂದ, ವಾದಿ ಈ ದಾವೆಯನ್ನು ಹಾಕಿರುತ್ತಾನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಸಮಯದಲ್ಲಿ ನನ್ನ ಗಂಡನಾದ ಅಂಬಾದಾಸ ಇವರು ಅವುಗಳ ಸಂಪೂರ್ಣ ಮಾಲೀಕರು ಇದ್ದರು ಎಂದರೆ ಸಾಕ್ಷಿಯು ಸದರಿ ಆಸ್ತಿಗಳು ನಮ್ಮ ಹಿರಿಯರ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ವಾದಿ ದಾವಾ ಆಸ್ತಿಗಳನ್ನು ಖರೀದಿ ಮಾಡಿರುವ ವಿಷಯ ಬೇರೆ ಜನರು ಮಾತನಾಡುವುದರ ಮೇಲಿಂದ ನನಗೆ ಗೊತ್ತಾಗಿರುತ್ತದೆ. 2010 ನೇ ಸಾಲಿನಲ್ಲಿ ನನ್ನ ಗಂಡ ದಾವಾ ಆಸ್ತಿಗಳನ್ನು ವಾದಿಗೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ.

ಈ ದಾವೆಯನ್ನು ವಾದಿ ದಾಖಲ ಮಾಡಿದ ನಂತರ ನಮಗೆ ನ್ಯಾಯಾಲಯದಿಂದ ನೋಟಿಸ ಬಂದ ನಂತರ ನನ್ನ ಗಂಡ ಅಂಬಾದಾಸ ಇವರು ದಾವಾ ಆಸ್ತಿಗಳನ್ನು ವಾದಿಗೆ ಮಾರಾಟ ಮಾಡಿರುವ ವಿಷಯ ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿಯು ಜನರು ಮಾತನಾಡುವುದರ ಮೇಲಿಂದ ನಮಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ನನ್ನ ಗಂಡನಾದ ಅಂಬಾದಾಸ ಇವರು ವಾದಿಗೆ ದಾವಾ ಆಸ್ತಿಗಳನ್ನು ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುವ ವಿಷಯ ನಿಮಗೆ ಗೊತ್ತಾದ ನಂತರ ನೀವೇನಾದರು ಅಂಬಾದಾಸ ಅಥವಾ ವಾದಿಯ ವಿರುದ್ದ ಸದರಿ ಖರೀದಿ ಪತ್ರ ಸುಳ್ಳು ಇರುತ್ತದೆ ಎಂದು ದಾವೆಯನ್ನು ಹಾಕಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಇದೆ ದಾವೆಯಲ್ಲಿ ತಕರಾರು ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಮತ್ತು ನನ್ನ ಗಂಡನಾದ ಅಂಬಾದಾಸ ಇವರ ಮಧ್ಯ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವೀಲ್ ಪ್ರಕರಣ ದಾಖಲಾಗಿರುವುದಿಲ್ಲ. ನಾನು ನನ್ನ ಗಂಡನಾದ ಅಂಬಾದಾಸ ಇವರ ವಿರುದ್ದ ಇ.ಪಿ ನಂ.9/2010 ನ್ನು ಪೋಟಗಿ ಹಣದ ವಸೂಲಾತಿಗಾಗಿ ದಾಖಲಿಸಿದ್ದೇನು ಎಂದರೆ ಸರಿ. ಸದರಿ ಪ್ರಕರಣ ದಿನಾಂಕ 24-09-2010 ರಂದು ಲೋಕ ಅದಾಲತನಲ್ಲಿ ಅಪಸಾತನಲ್ಲಿ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಇ.ಪಿ ಲೋಕ ಅದಾಲತನಲ್ಲಿ ಅಪಸಾತ ಆಗಿರುತ್ತದೆ ಎಂದು ತೋರಿಸಲು ನಾನು ನಿಪಿ-15 ದಾಖಲಾತಿಯನ್ನು ಹಾಜರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ 22 ದಾಖಲಾತಿಗಳನ್ನು ಹಾಜರ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಇರುವ ಮನೆಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ, ನಾನು ಒಪ್ಪಿಕೊಂಡ ಪ್ರಕಾರ ದಾವಾ ಆಸ್ತಿಯ ಸ್ವಾಧಿನತೆಯನ್ನು ವಾದಿಗೆ ಬಿಟ್ಟು ಕೊಡದೆ ಇದ್ದುದ್ದರಿಂದ ವಾದಿಯು ಈ ದಾವೆಯನ್ನು ಹಾಕಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಗೆ ಬಿಟ್ಟು ಕೊಡಬಾರದು ಎಂಬ ದುರುದ್ದೇಶದಿಂದ ನಾನು ಸುಳ್ಳು ತಕರಾರನ್ನು ಸಲ್ಲಿಸಿ, ಸುಳ್ಳು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿಚಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

SD/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿ:**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.12.31 17:51:28 +0530